**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿಜೆಎಂ, ರಾಯಚೂರು**
**ಸಿ.ಸಿ.ನಂಬರು.3963/2021**

**CW-4 /PW-2**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಮಾರೆಮ್ಮ |
| ತಂದೆಃ ಹೆಸರು | ಃ | ಮಾರೆಪ್ಪ |
| ವಯಸ್ಸು | ಃ | 40 |
| ಉದ್ಯೋಗ | ಃ | ಮನೆಗೆಲಸ |
| ವಿಳಾಸ | ಃ | ರಾಯಚೂರು |

**ಮುಖ್ಯ ವಿಚಾರಣೆ ಅಬಿಯೋಜನೆ ಪರ ಮಾನ್ಯ ಹಿರಿಯ ಸ.ಸ.ಅ.ಅವರಿಂದ**
**ಪ್ರಮಾಣೀಕರಿಸಿದ ದಿನಾಂಕಃ 02-07-2024**

ಚಾಸಾ-1 ನನ್ನ ಅಣ್ಣ, ಚಾಸಾ-5 ನನ್ನ ಮಗ, ಚಾಸಾ-7 ನನ್ನ ಅತ್ತಿಗೆ, ಚಾಸಾ-6 ಮತ್ತು 8 ಗೊತ್ತು. ಆರೋಪಿತರು ನಮ್ಮ ಮನೆ ಪಕ್ಕದವರು. ಮಾರ್ಚ್ 21 ಸುಮಾರು 3 ವರ್ಷಗಳ ಹಿಂದೆ ಮಧ್ಯಾಹ್ನ 12 ಗಂಟೆಗೆ ಆರೋಪಿತರು ಚಾಸಾ-1 ರವರಿಗೆ ಜಾಗದ ವಿಷಯವಾಗಿ ಹೊಡೆದಿರುತ್ತಾರೆ. ಆರೋಪಿತರು ಚಾಸಾ-1 ರವರಿಗೆ ತಲೆಗೆ ಗಾಯವಾಗಿರುತ್ತದೆ. ಜಗಳ ಸಮಯದಲ್ಲಿ ನಾನು ಹೊರಗಡೆ ಇದ್ದೆ. ನಂತರ ನಾನು ಚಾಸಾ-1 ರವರಿಗೆ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತೇನೆ.

(**ಈ ಹಂತದಲ್ಲಿ ಮಾನ್ಯ ಹಿರಿಯ ಸಸಅ ಅವರು** ಸಾಕ್ಷಿಯನ್ನು ಭಾಗಶಃ **ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ಕೊಡಲಾಯಿತು**.)

**ಪಾಟೀ ಸವಾಲುಃ** ಮಾನ್ಯ ಹಿರಿಯ ಎಪಿಪಿ ಅವರಿಂದಃ

ದಿನಾಂಕ 21.03.2021 ರಂದು ಮಧ್ಯಾಹ್ನ 12.00 ಗಂಟೆಗೆ ಆರೋಪಿತರು ಸೇರಿ ಚಾಸಾ-1 ರವರಿಗೆ ಕಟ್ಟಿಗೆಯಿಂದ ಹೊಡೆದು ಗಾಯ ಮಾಡಿರುತ್ತಾರೆ ಎಂದರೆ ಸರಿ. 2 ನೇ ಆರೋಪಿ ಚಾಸಾ-1 ರವರಿಗೆ ಮುಂದೆ ಹೊಗದಂತೆ ತಡೆದು ನಿಲ್ಲಿಸಿ ಕೈಗಳಿಂದ ಬೆನ್ನಿಗೆ ಹೊಡೆದನು ಎಂದರೆ ಸರಿ. 2 ನೇ ಆರೋಪಿ ಚಾಸಾ-1 ರವರಿಗೆ ಕಪಾಳಕ್ಕೆ ಹೊಡೆ ಬಡೆ ಮಾಡಿರುತ್ತಾರೆ ಎಂದರೆ ಸರಿ. ಆರೋಪಿತರು ಸೇರಿ ಚಾಸಾ-1 ರವರಿಗೆ ಜೀವದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಆಗ ನಾನು ಮತ್ತು ಚಾಸಾ-5 ರಿಂದ 8 ರವರು ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿ. ಅ ಸಮಯದಲ್ಲಿ ನಾನು ಹಾಜರು ಇದ್ದೆ ಎಂದರೆ ಸರಿ. ಪೋಲಿಸರು ಪಂಚನಾಮೆ ಮಾಡಲು ಬಂದಾಗ ಗುನ್ನೆ ಸ್ಥಳ ನಾನೇ ತೋರಿಸಿರುತ್ತೇನೆ ಎಂದರೆ ಸರಿ. ಸದರಿ ಸಮಯದಲ್ಲಿ ಭಾವಚಿತ್ರ ತೆಗೆದಿದ್ದು ಅವುಗಳನ್ನು ಈಗಾಗಲೇ ನಿಪಿ-2 ಮತ್ತು 3 ಎಂದು ಗುರುತಿಸಲಾಗಿದೆ. ಈಗ ನ್ಯಾಯಾಲಯದ ಮುಂದೆ ಇರುವ ಮುಮಾ-1 ರಿಂದ ಆರೋಪಿತರು ಚಾಸಾ-1ರವರಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಈ ಬಗ್ಗೆ ನಾನು

ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ **ಎ.ಎಲ್.ಡಿ.ಸಿ ಇವ**ರಿಂದ

ಜಗಳ ನಡೆದಾಗ ನಾನು ಮನೆ ಒಳಗಡೆ ಇದ್ದೆ. ಜಗಳ ನಡೆದ ಸಮಯದಲ್ಲಿ ನಾನು ಮನೆ ಒಳಗಡೆ ಇದ್ದೆ ಎಂದರೆ ಸರಿಯಲ್ಲ. ಮುಮಾ-1 ಮೂವರ ಕೈಯಲ್ಲಿ ಇತ್ತು. ಯಾರ ಕೈಯಲ್ಲಿ ಇತ್ತು ಎಂದು ನಾನು ನೋಡಿಲ್ಲ. ಜಗಳ ನಡೆದಾಗ ಸುಮಾರು 20 ಜನ ಸೇರಿದ್ದರು. ಆಸ್ಪತ್ರೆಗೆ ಚಾಸಾ-1 ರವರನ್ನು ನಾನೇ ಕರೆದುಕೊಂಡು ಹೋಗಿರುತ್ತೇನೆ. ಜಗಳ ನಡೆದ 3 ದಿನಗಳ ನಂತರ ನಾನು ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಜಗಳ ನಡೆದ ದಿನ ನಾವು ಪೊ.ಠಾ ಹೋಗಿ ದೂರನ್ನು ನೀಡಿರುತ್ತೇವೆ. ಕಮಲಪೂರು ಅಡಿವೆಮ್ಮ ನಮ್ಮ ಅಜ್ಜ ಆಗಬೇಕು ಎಂದರೆ ಸರಿ. ಅಡಿವೆಮ್ಮ ಇವರು ಘಟನೆ ನಡೆದ ಸ್ಥ.ಳದ ಜಾಗೆಯನ್ನು ಶೇಶಯ್ಯ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಶೇಶಯ್ಯ ಇವರು 3 ನೇ ಆರೋಪಿ ಜಯಪ್ಪನಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. 3 ನೇ ಆರೋಪಿ ಕಾನೂನು ಬದ್ದವಾಗಿ ಖರೀದಿ ಮಾಡಿದ್ದರು ಸಹ ನಾವು ಅದನ್ನು ಬಿಡುತ್ತಿಲ್ಲ ಎಂದರೆ ಸಾಕ್ಷಿಯು ಬಿಟ್ಟಿಲ್ಲ ಅದು ನಮ್ಮ ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಚಾಸಾ-1 ರವರಿಗೆ ಕುಡಿತದ ಅಭ್ಯಾಸ ಇರುತ್ತದೆ ಎಂದರೆ ಸರಿ. ದಿನಾಂಕ 21.03.2022 ರಂದು ಚಾಸಾ-1 ರವರು ಕುಡಿದು ರಸ್ತೆ ಮೇಲೆ ಬರುತ್ತಿದ್ದಾಗ ಯಾವುದೋ ಒಂದು ವಾಹನ ಆತನಿಗೆ ಗುದ್ದಿದ್ದರಿಂದ ತಲೆಗೆ ಗಾಯಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)

**ಪ್ರಧಾನ ಹಿರಿಯ ಸಿ.ಜೆ ಮತ್ತು ಸಿಜೆಎಂ, ರಾಯಚೂರು.**